# ಗಾಂಧಿನಗರ ಪೋಸ್ಟ್

■ ರಘು

## ಹೆಚ್ಚು ತೆರೆ; ಕಾಸಿನ ತೊರೆ

'ಹೆಚ್ಚು ಹೆಚ್ಚು ತೆರೆ, ಕಾಸಿನ ತೊರೆ' ಎನ್ನುವುದು ಸದ್ಯ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಫಾರ್ಮುಲಾ. 'ಜಾಕಿ' ತೋರಿಸಿಕೊಟ್ಟ ಈ ಹಾದಿ ಈಗ ದೊಡ್ಡ ಬಜೆಟ್ಟಿನ ಚಿತ್ರಗಳಿಗೆ ಹೆದ್ದಾರಿಯಾಗಿದೆ. 'ಸೂಪರ್', 'ಮೈಲಾರಿ' ಚಿತ್ರಗಳು ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ತೆರೆಕಾಣುವ ಮೂಲಕ ಕಾಸು ಮಾಡಿದ್ದು, 'ವೀರ ಪರಂಪರೆ'ಯೂ ಗೆದ್ದಿದ್ದು– ಗಾಂಧಿನಗರದ ಪಾಲಿಗೆ ಯಶಸ್ಸಿನ ಫಾರ್ಮುಲಾವೊಂದು ದೊರೆತಂತಾಗಿದೆ.

'ವರ್ಚಸ್ಸುಳ್ಳ ನಾಯಕರ ಚಿತ್ರಗಳಾದರೆ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವುದರಿಂದ ಲಾಭವಿದೆ' ಎನ್ನುವುದು ನಿರ್ಮಾಪಕ–ವಿತರಕ ಕುಮಾರ್ ಅವರ ಅನಿಸಿಕೆ. ದರ್ಶನ್ ದ್ವಿಪಾತ್ರದಲ್ಲಿ ಅಭಿನಯಿಸಿರುವ 'ಬಾಸ್' ಚಿತ್ರದ ವಿತರಣೆಯ ಹೊಣೆ ಹೊತ್ತಿರುವ ಕುಮಾರ್, 'ಬಾಸ್' ಚಿತ್ರವನ್ನು ಸುಮಾರು 135 ಚಿತ್ರಮಂದಿರಗಳಲ್ಲಿ ತೆರೆಕಾಣಿಸಿದ್ದಾರೆ. ರಾಜಧಾನಿ, ಜಿಲ್ಲಾಕೇಂದ್ರಗಳು ಮಾತ್ರವಲ್ಲದೆ ತಾಲ್ಲೂಕು ಕೇಂದ್ರಗಳಿಗೂ 'ಬಾಸ್' ಲಗ್ಗೆಯಿಟ್ಟಿದೆ. ಕೆಲವೆಡೆ, ಕುಮಾರ್ ಅಡ್ವಾನ್ಸ್ ತೆಗೆದುಕೊಳ್ಳದೆಯೇ ಸಿನಿಮಾ ತೆರೆಕಾಣಿಸಿದ್ದಾರೆ. ಕನ್ನಡ ಚಿತ್ರಗಳಿಗೆ ಅಷ್ಟೇನೂ ಮಾರುಕಟ್ಟೆಯಿಲ್ಲದ ಪ್ರದೇಶಗಳಲ್ಲೂ 'ಬಾಸ್'ನನ್ನು ನುಗ್ಗಿಸಿದ್ದಾರೆ.

ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣಿಸುವುದನ್ನು ಸಮರ್ಥಿಸಿಕೊಳ್ಳುವ 'ಬಾಸ್' ಚಿತ್ರದ ನಿರ್ಮಾಪಕ ರಮೇಶ್ ಯಾದವ್– 'ಪೈರಸಿ ಸೀಡಿಗಳು ತಯಾರಾಗುವ ಮೊದಲು ಜನರನ್ನು ನಾವೇ ತಲುಪುವುದು ಒಳ್ಳೆಯದು' ಎನ್ನುತ್ತಾರೆ.



## ಚಿನ್ನಸ್ವಾಮಿಯ ಮಾಗಿ



ಚಿನ್ನಸ್ವಾಮಿ, ನಿಶಾಂತ್, ಬಿಂದು ಮತ್ತು ಶಿವರುದ್ರಯ್ಯ

ನಸುಬಿರಿದ ಗುಲಾಬಿಯೊಂದಿಗೆ ಎಳ್ಳುಬೆಲ್ಲದ ಪೊಟ್ಟಣ. ನಿಶಾಂತ್ ಹಾಗೂ ಬಿಂದು ಸ್ವಾಗತಿಸುತ್ತಿದ್ದ ರೀತಿಯೇ, 'ಇದು ಮಾಮೂಲಿ ಚಿತ್ರವಲ್ಲ' ಎನ್ನುವುದನ್ನು ಸೂಚ್ಯವಾಗಿ ಹೇಳುವಂತಿತ್ತು. 'ಮಾಗಿಯ ಕಾಲ'– ತಮ್ಮೆಲ್ಲ ಚಿತ್ರಗಳಿಗೆ ಒಂದಲ್ಲ ಒಂದು ಪ್ರಶಸ್ತಿ ಪಡೆದಿರುವ ಕೆ.ಶಿವರುದ್ರಯ್ಯನವರ ನಿರ್ದೇಶನದ ಹೊಸಚಿತ್ರ.

'ಮಾಗಿಯ ಕಾಲ' ಚಿತ್ರಕ್ಕೆ ಸಂಬಂಧಿಸಿದಂತೆ ಒಂದಷ್ಟು ವಿಶೇಷಗಳಿವೆ. ಹಿರಿಯ ಕಥೆಗಾರ ಈಶ್ವರಚಂದ್ರ ಅವರ 'ಒಂದು ಸೂರ್ಯನ ಕೆಳಗೆ' ಕಾದಂಬರಿ ಆಧರಿಸಿದ ಚಿತ್ರವಿದು ಎನ್ನುವುದು ಮೊದಲ ವಿಶೇಷ. ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಈ ಸಿನಿಮಾದ ನಿರ್ಮಾತೃ ಎನ್ನುವುದು ಮತ್ತೊಂದು ವಿಶೇಷ. ಚಿನ್ನಸ್ವಾಮಿಯವರ ಮಗ ನಿಶಾಂತ್ ಚಿತ್ರದ ನಾಯಕ ಎನ್ನುವುದೂ ವಿಶೇಷವೇ. 'ವಿಚಾರಗಳ ಸಂವಹನಕ್ಕೆ ಸಿನಿಮಾ ಪರಿಣಾಮಕಾರಿಯಾದ ಮಾಧ್ಯಮ ಎನ್ನುವುದು' ಮೂಡ್ನಾಕೂಡು ಅವರ ನಂಬಿಕೆ.

ನಿಶಾಂತ್‌ಗೆ ಮೊದಲ ಅನುಭವ ಮಾಗಿಯಷ್ಟೇ ಹಿತಕರವಾಗಿದೆ. 'ಸಿನಿಮಾದಲ್ಲಿ ನನ್ನ ಅನುಭವ ಸಣ್ಣದು. ಆದರೆ ಈ ಚಿತ್ರದಿಂದ ಗಳಿಸಿದ ಅನುಭವ ದೊಡ್ಡದು' ಎನ್ನುವುದು ಅವರ ವಿನಯದ ಮಾತು.

ನಿರ್ದೇಶಕರಾಗಿ ಶಿವರುದ್ರಯ್ಯನವರಿಗೆ 'ಮಾಗಿಯ ಕಾಲ' ತುಂಬಾ ಖುಷಿಕೊಟ್ಟಿದೆಯಂತೆ. 'ಚೈತ್ರದ ಚಿಗುರು' ನಂತರ ಅವರಿಗೆ ಪೂರ್ಣ ತೃಪ್ತಿ ತಂದುಕೊಟ್ಟ ಕೊಟ್ಟ ಚಿತ್ರ ಇದಂತೆ. ಬೆಂಗಳೂರು, ಮೈಸೂರು, ಕುಶಾಲನಗರ, ಮಂಗಳೂರುಗಳಲ್ಲಿ ಚಿತ್ರೀಕರಣ ನಡೆಸಿದ್ದಾರೆ. ಕಳೆದ ಡಿಸೆಂಬರ್‌ನ ಕೊನೆಯಲ್ಲಿ ಸೆನ್ಸಾರ್ ಪ್ರಮಾಣಪತ್ರ ಪಡೆದಿರುವ 'ಮಾಗಿಯ ಕಾಲ' ರಾಷ್ಟ್ರೀಯ ಪ್ರಶಸ್ತಿಗಳ ಸ್ಪರ್ಧಾಕಣ ಪ್ರವೇಶಕ್ಕೆ ಸಜ್ಜಾಗಿದೆ.

## ರಂಗಾದರು ರಘು

'ರಾಮೇಗೌಡ ವರ್ಸಸ್ ಕೃಷ್ಣೇಗೌಡ' ಚಿತ್ರದಲ್ಲಿ ಗುಹ್ಯರೋಗದಿಂದ ಬಳಲುತ್ತಿರುವವರಂತೆ ಚಡಪಡಿಸಿದ್ದ ರಘು ಅವರನ್ನು ಕಂಡು– 'ಕೋಟಿ ಕೊಟ್ರೂ ನಾನಿಂಥ ಪಾರ್ಟು ಮಾಡಲಾರೆ' ಎಂದು ಹಾಸ್ಯ ಕಲಾವಿದರೊಬ್ಬರು ಪಿಸುಗುಟ್ಟಿದ್ದರು. ಸಿಕ್ಕಸಿಕ್ಕ ಪಾತ್ರಗಳನ್ನೆಲ್ಲ ಮಾಡುವ ರಘು ಅಪರೂಪಕ್ಕೊಮ್ಮೆ ಒಳ್ಳೆಯ ಪಾತ್ರಗಳಲ್ಲೂ ನಟಿಸುವುದಿದೆ. ಅಂಥದೊಂದು ಪಾತ್ರ 'ಒಲವೇ ಮಂದಾರ' ಚಿತ್ರದ್ದು.

ರಂಗಭೂಮಿ ಹಿನ್ನೆಲೆಯ ಜಯತೀರ್ಥ ನಿರ್ದೇಶನದ 'ಒಲವೇ ಮಂದಾರ' ಚಿತ್ರದಲ್ಲಿ ರಘು ಅವರದ್ದು ನಾಯಕನಷ್ಟೇ ಮುಖ್ಯವಾದ ಪಾತ್ರವಂತೆ. ಕುಂಟಿ ಹೆಂಡತಿಯನ್ನು (ವೀಣಾ ಸುಂದರ್) ಕಾಶಿ ತೋರಿಸಲಿಕ್ಕೆಂದು ಎತ್ತಿನಗಾಡಿಯಲ್ಲಿ ಕೂರಿಸಿಕೊಂಡು, ಆ ಗಾಡಿಯನ್ನು ಕನಕಪುರದಿಂದ ಕಾಶಿಗೆ ಎಳೆದೊಯ್ಯುವ ಗಂಡನ ಪಾತ್ರ ಅವರದ್ದು. ಈ ಪಾತ್ರ ಕಲಾವಿದನಾಗಿ ರಘು ಅವರಿಗೆ ತೃಪ್ತಿ ತಂದುಕೊಟ್ಟಿದೆಯಂತೆ.

ಕಾಶಿಯಲ್ಲಿನ ಅನುಭವ ರಘು ಅವರನ್ನು ತಲ್ಲಣಗೊಳಿಸಿದೆ, 'ಇಷ್ಟೇನಾ ಬದುಕು' ಎನ್ನುವ ಭಾವವನ್ನೂ ಮೂಡಿಸಿದೆ. ಒಂದಿಡೀ ದಿನ ಹೆಪ್ಪುಗಟ್ಟಿಸುವ ಗಂಗೆಯಲ್ಲಿ ನಿಂತಿದ್ದ ಅವರ ಬದ್ಧತೆಯ ಬಗ್ಗೆ ಚಿತ್ರತಂಡವೂ ಮೆಚ್ಚುಗೆ ವ್ಯಕ್ತಪಡಿಸಿದೆ. ಇಂಥ ಅಪರೂಪದ ಪಾತ್ರಗಳೇ ರಘು ಅವರ ಉಳಿದ ಪಾತ್ರಗಳ ಅಪಸವ್ಯಗಳನ್ನು ಮರೆಯುವಂತೆ ಮಾಡುವುದು, ಅಲ್ಲವೇ?

